C.R.P.67

Form No.4 (Civil)
Deposition Sheets
(R.P.No.57)

## 6 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.

## ಎಸ್ ಸಿ ಸಂಖ್ಯೆ: 296/2018

**ಪ್ರಾಸಾ.28 ಚಾಸಾ.22**

| | | |
|---|---|---|
| **ಸಾಕ್ಷಿದಾರರ ಹೆಸರು** | : | ಲೋಕೇಶ್ |
| **ತಂದೆ ಹೆಸರು** | : | ಲೇಟ್ ಗೋಪಾಲಯ್ಯ |
| **ವಯಸ್ಸು** | : | 38 ವರ್ಷಗಳು |
| **ಉದ್ಯೋಗ** | : | ಸಿಸಿಟಿವಿ ಟೆಕ್ನಿಷಿಯನ್ |
| **ವಾಸ** | : | ಕೋಲಾರ |

## ಪ್ರಮಾಣ ವಚನ ಬೋಧಿಸಿದ ದಿನಾಂಕ: 21.06.2023

## ಮುಖ್ಯ ವಿಚಾರಣೆ: ಮಾನ್ಯ ಸರ್ಕಾರಿ ಅಭಿಯೋಜಕರಿಂದ:

ಚಾಸಾ-21 ನನಗೆ ಗೊತ್ತಿಲ್ಲ. ಈಗ ತೋರಿಸಿದ ನಿಶಾನೆ ಪಿ-18 ರಲ್ಲಿ ನನ್ನ ಸಹಿ ಇರುತ್ತದೆ. ಸಾಕ್ಷಿಯ ಸಹಿಯನ್ನು ನಿಶಾನೆ ಪಿ-18(ಬಿ) ಎಂದು ಗುರುತಿಸಲಾಯಿತು.

2. ದಿನಾಂಕ 17.11.2017 ರಂದು ನಿಶಾನೆ ಪಿ-18 ಕ್ಕೆ ನಾನು ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ. ನಾವು ಸೆಪ್ಟೆಂಬರ್ 2017 ರಲ್ಲಿ ಕವಿತಾ ಡಾಬಾದಲ್ಲಿ ಸಿಸಿಟಿವಿ ಹಾಕಿದ್ದೇವು. ಪೊಲೀಸರವರು ನನಗೆ ಕವಿತಾ ಡಾಬಾದಲ್ಲಿ ಕೊಲೆ ಆಗಿರುತ್ತದೆ, ನಾವು ಅಳವಡಿಸಿದ ಸಿಸಿಟಿವಿ ಮತ್ತು

ಹಾರ್ಡ್ ಡಿಸ್ಕ್ ನ್ನು ಡಾಬಾದಿಂದ ತೆಗೆದುಕೊಂಡು ಬಂದಿರುತ್ತೇವೆ, ನೀವು ಅದರ ಪಾಸ್ ವರ್ಡ್ ಕೋಡು ಎಂದು ಕೇಳಿದರು. ಅದಕ್ಕೆ ನಾನು ಪೊಲೀಸರಿಗೆ ಮೊದಲು ನಾವು ಸಿಸಿಟಿವಿ 123 ಎಂದು ಪಾಸ್‌ವರ್ಡ್ ಕೊಟ್ಟಿರುತ್ತೇವೆ ನಂತರ ಕಸ್ಟ್ ಮರ್ ಗಳು ಅವರ ವೈಯಕ್ತಿಕ ಪಾಸ್‌ವರ್ಡ್ ಹಾಕಿಕೊಂಡಿರುತ್ತಾರೆ ಎಂದು ತಿಳಿಸಿದೆವು. ಆಗ ಪೊಲೀಸರವರು ನಿಶಾನೆ ಪಿ-18 ಕ್ಕೆ ನನ್ನ ಸಹಿ ಪಡೆದುಕೊಂಡಿರುತ್ತಾರೆ. ನಾನು ಕವಿತಾ ಡಾಬಾ ಗೆ ಹೋಗಿ ನಾನು ಅಲ್ಲಿ ಅಳವಡಿಸಿದ ಸಿಸಿಟಿವಿ ಮತ್ತು ಹಾರ್ಡ್ ಡಿಸ್ಕ್ ನ್ನು ಪೊಲೀಸರಿಗೆ ತೆಗೆದುಕೊಟ್ಟಿರುವುದಿಲ್ಲ.

**(ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರು ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದಾರೆ. ಕಡತದಲ್ಲಿರುವ ಅಂಶಗಳನ್ನು ಪರಿಗಣಿಸಲಾಗಿ ಸಾಕ್ಷಿದಾರರು ಅಭಿಯೋಜನೆಯ ಕೇಸಿಗೆ ವಿರುದ್ಧವಾಗಿ ಸಾಕ್ಷಿ ನುಡಿಯುತ್ತಿರುವುದು ಕಂಡುಬರುತ್ತದೆ. ಈ ಕಾರಣದಿಂದ ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಅವರನ್ನು ಪಾಟೀ ಸವಾಲಿಗೆ ಒಳಪಡಿಸಲು ಮಾನ್ಯ ಸರ್ಕಾರಿ ಅಭಿಯೋಜಕರಿಗೆ ಅನುಮತಿ ನೀಡಲಾಯಿತು)**

## ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ

1. ದಿನಾಂಕ 21.11.2017 ರಂದು ನನ್ನ ಹಾಗೂ ಚಾಸಾ-21 ರವರನ್ನು ವಿಜಯಪುರ ಕೋಲಾರ್ ರಸ್ತೆಯಲ್ಲಿರುವ ಹೆಚ್ ಕ್ರಾಸ್ ಬಳಿ ಇರುವ ಕವಿತಾ ಡಾಬಾಗೆ ಕರೆಸಿದ್ದರು ಎಂದರೆ ಸರಿಯಲ್ಲ. ನಂತರ ಪೊಲೀಸರವರು ದಿನಾಂಕ 17.11.2017 ರಂದು ಕವಿತಾ ಡಾಬಾದಲ್ಲಿ ಗಲಾಟೆ ಆಗಿ, ಗಲಾಟೆಯಲ್ಲಿ ಕವಿತಾ ಮೃತಪಟ್ಟಿರುತ್ತಾಳೆ, ಗಲಾಟೆಯಾದ ದೃಶ್ಯಾವಳಿಗಳು ಸಿಸಿಟಿವಿಯಲ್ಲಿ ಸೆರೆಯಾಗಿರುತ್ತವೆ, ಆದ್ದರಿಂದ ಡಾಬಾದಲ್ಲಿ ಅಳವಡಿಸಿದ ಸಿಸಿಟಿವಿ ಮತ್ತು ಹಾರ್ಡ್ ಡಿಸ್ಕ್ ನ್ನು

ತೆಗೆದುಕೊಡುವಂತೆ ನನಗೆ ತಿಳಿಸಿದರು ಎಂದರೆ ಸರಿಯಲ್ಲ. ನಂತರ ಡಾಬಾದಲ್ಲಿದ್ದ ಹಾರ್ಡ್ ಡಿಸ್ಕ್‌ನ್ನು ಪೊಲೀಸರವರಿಗೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ನಾನು ನೀಡಿದ ಸಿಪಿ ಪ್ಲಸ್ ಹಾರ್ಡ್ ಡಿಸ್ಕ್‌ನ್ನು ಪೊಲೀಸರವರು ತೆಗೆದುಕೊಂಡು ಅದನ್ನು ವಶಪಡಿಸಿಕೊಂಡು ನನ್ನ ಸಮಕ್ಷಮ ನಿಶಾನೆ ಪಿ-18 ರಂತೆ ಬೆಳಗ್ಗೆ 11.00 ರಿಂದ 12.00 ಗಂಟೆಯವರೆಗೆ ಮಹಜರ್ ಕ್ರಮ ಜರುಗಿಸಿ ನನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಾನು ಕವಿತಾ ಡಾಬಾದಲ್ಲಿ ಸಿಪಿ ಪ್ಲಸ್ ಹಾರ್ಡ್ ಡಿಸ್ಕ್‌ನ್ನು ಪೊಲೀಸರಿಗೆ ನೀಡಿದ್ದರು ಸಹ ಆರೋಪಿಗೆ ಅನುಕೂಲ ಮಾಡಲೆಂದುಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಶ್ರೀ ಎಮ್.ಪಿ. ವಕೀಲರಿಂದ ಆರೋಪಿತರ ಪರವಾಗಿಃ**

ಆರೋಪಿತರ ಪರ ವಕೀಲರು ತಮ್ಮದೂ ಪಾಟೀ-ಸವಾಲು ಇಲ್ಲ ಎಂದು ಹೇಳುತ್ತಾರೆ.

**ಮರು ವಿಚಾರಣೆ ಇಲ್ಲ.**

**(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)**

ಓ. ಹೇ. ಕೇ. ಸ. ಒ.

(ರವೀಂದ್ರ. ಆರ್)
6 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.